ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 152(1068)
ಸದಸ್ಯರ ಹೆಸರು : ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 12-03-2021.
ಉತ್ತರಿಸುವ ಸಚಿವರು : ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ.</td><td>ರಾಜ್ಯದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಯಾವ ಯಾವ ಶಾಲಾ ಕಾಲೇಜುಗಳನ್ನು ನಡೆಸಲಾಗುತ್ತಿದೆ; (ವಿವರ ನೀಡುವುದು)</td><td>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ನಡೆಸಲಾಗುತ್ತಿರುವ ಶಾಲಾ/ ವಸತಿ ಶಾಲೆ/ಕಾಲೇಜುಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ.ಸಂ</th><th>ವಸತಿ ಶಾಲೆ/ಕಾಲೇಜು</th></tr>
<tr><td>1</td><td>ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ</td></tr>
<tr><td>2</td><td>ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು</td></tr>
<tr><td>3</td><td>ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ (ನವೋದಯ)</td></tr>
<tr><td>4</td><td>ಮೌಲಾನಾ ಆಜಾದ್ ಮಾದರಿ ಶಾಲೆ</td></tr>
<tr><td>5</td><td>ಸರ್ಕಾರಿ ಮುಸ್ಲಿಂ ವಸತಿ ಶಾಲೆ</td></tr>
</table></td></tr>
<tr><td>ಆ.</td><td>ಸದರಿ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಬೋಧಕೇತರ ಸಂಖ್ಯೆ ಎಷ್ಟು; (ವಿವರ ನೀಡುವುದು.)</td><td>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ನಡೆಸಲಾಗುತ್ತಿರುವ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ/ಬೊಧಕೇತರರ ವಿವರ ಈ ಕೆಳಕಂಡಂತಿದೆ :
<table>
<tr><th>ಕ್ರ.ಸಂ</th><th>ವಸತಿ ಶಾಲೆ</th><th>ಬೋಧಕ</th><th>ಬೋಧಕೇತರ</th></tr>
<tr><td>1</td><td>ಮೊರಾರ್ಜಿ ದೇಸಾಯಿ ವಸತಿ ಶಾಲೆ</td><td>552</td><td>192</td></tr>
<tr><td>2</td><td>ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು</td><td>82</td><td>11</td></tr>
<tr><td>3</td><td>ಮಾದರಿ ವಸತಿ ಶಾಲೆ (ನವೋದಯ)</td><td>31</td><td>9</td></tr>
<tr><td>4</td><td>ಮೌಲಾನಾ ಆಜಾದ್ ಮಾದರಿ ಶಾಲೆ</td><td>0</td><td>0</td></tr>
<tr><td>5</td><td>ಸರ್ಕಾರಿ ಮುಸ್ಲಿಂ ವಸತಿ ಶಾಲೆ</td><td>23</td><td>41</td></tr>
<tr><td colspan="2">ಒಟ್ಟು</td><td>688</td><td>253</td></tr>
</table></td></tr>
<tr><td>ಇ</td><td>ಸದರಿ ಸಿಬ್ಬಂದಿಯವರಿಗೆ ನೇಮಕಾತಿ ಮಾಡಿದಾಗಿನಿಂದ ಇದುವರೆವಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾಡದಿರಲು ಕಾರಣಗಳೇನು;</td><td>ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ಪ್ರಸ್ತುತ 2011ರ ವೃಂದ ಮತ್ತು ನೇಮಕಾತಿ ನಿಯಮಗಳು ಚಾಲ್ತಿಯಲ್ಲಿರುತ್ತದೆ. ಈ ಆಧಾರದ ಮೇಲೆ ಮತ್ತು ಸರ್ಕಾರದ ಕಾರ್ಯಕಾರಿ ಆದೇಶಗಳ ಮೇರೆಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದಡಿ 2016-17ನೇ ಸಾಲಿನಿಂದ ವಿವಿಧ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮೂಲಕ ನೇರ ನೇಮಕಾತಿಯನ್ವಯ ಭರ್ತಿ ಮಾಡಲಾಗಿರುತ್ತದೆ.

2011ರ ನಂತರ ಹೊಸದಾಗಿ ಸೃಜಿಸಿ ಮಂಜೂರಾಗಿರುವ ಸುಮಾರು 50 ವಿವಿಧ ವೃಂದಗಳ ಹುದ್ದೆಗಳನ್ನು ಸೇರಿಸಿ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಯ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.</td></tr>
<tr><td>ಈ</td><td>ವೃಂದ ಮತ್ತು ನೇಮಕಾತಿ ನಿಯಮ ಮಾಡದಿರುವುದರಿಂದ ಸದರಿ ಇಲಾಖೆಯಿಂದ ಹಲವಾರು ಸಿಬ್ಬಂದಿಗೆ ಬಡ್ತಿ ಇಲ್ಲದೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಮಾಡಲಾಗುವುದು;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
</table>

ಉ	ಸದರಿ ಇಲಾಖೆಯಲ್ಲಿ ಬಡ್ತಿಗಾಗಿ ಯಾವ ಯಾವ ಎಷ್ಟು ಹುದ್ದೆಗಳನ್ನು ಉಳಿಸಿಕೊಳ್ಳಲಾಗಿದೆ?(ವಿವರ ನೀಡುವುದು)	ಪ್ರಸ್ತುತ 2011 ರ ವೃಂದ ಮತ್ತು ನೇಮಕಾತಿ ನಿಯಮಗಳು ಚಾಲ್ತಿಯಲ್ಲಿರುವುದರಿಂದ ಇದರಲ್ಲಿ 2011ರ ನಂತರ ಹೊಸದಾಗಿ ಸೃಜಿಸಿ ಮಂಜೂರಾಗಿರುವ ಸುಮಾರು 50 ವಿವಿಧ ವೃಂದಗಳ ಹುದ್ದೆಗಳು ಸೇರ್ಪಡೆಯಾಗಿರುವುದಿಲ್ಲ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳು ಪರಿಷ್ಕರಣೆಯಾಗಿಲ್ಲದ ಕಾರಣ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಕಾಯ್ದಿರಿಸಲಾದ ಹುದ್ದೆಗಳ ಅನುಪಾತ ಅಂತಿಮಗೊಂಡಿರುವುದಿಲ್ಲ. ಇದನ್ನು ಸಧ್ಯದಲ್ಲಿಯೇ ಪರಿಷ್ಕರಿಸುವ ನೂತನ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರಿಸಲಾಗುವುದು.

ಸಂಖ್ಯೆ: **MWD 87 LMQ 2021**

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು